P.C.J & JMFC, Tarikere
(Itinerate at Ajjampura).

OS No. 396/2018
DW-2

**ಸಾಕ್ಷಿಗೆ ದಿನಾಂಕ:05-06-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಪ್ರತಿವಾದಿ ಪರ ಶ್ರೀ. GVK ವಕೀಲರಿಂದ ::**

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದು, ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ. ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಆದುದರಿಂದ ಪ್ರತಿವಾದ ಪತ್ರದಲ್ಲಿ ಕೋರಿಕೊಂಡಂತೆ ದಾವೆಯನ್ನು ವಜಾ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**:: ಪಾಟೀ ಸವಾಲು :: ವಾದಿ ಪರ ಶ್ರೀಮತಿ ಎಸ್ ಎಂ ವಕೀಲರಿಂದ ::**

ನನಗೆ ವಾದಿ ಸಲ್ಲಿಸಿರುವ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ನನ್ನ ಮೃತ ಗಂಡನಿಗೆ 6 ಜನ ಸಹೋದರ - ಸಹೋದರಿಯರು ಇರುತ್ತಾರೆ. 1 ನೇ ಪ್ರತಿವಾದಿಯು ಹಿಂದೆ ಸಲ್ಲಿಸಿದ್ದ ದಾವೆಯಲ್ಲಿ ನಾನು ಸಹ ಪಕ್ಷಗಾರಳಾಗಿದ್ದೆ ಎಂದರೆ ಸರಿಯಲ್ಲ. ನಾನು ಹಿಂದಿನ ದಾವೆಯಲ್ಲಿ ಸಾಕ್ಷಿ ನುಡಿದಿದ್ದರು ಇಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಿಂದಿನ ದಾವೆಯಲ್ಲಿ ನನ್ನ ಅಜ್ಜ ಮಾಡಿರುವ ವಿಲ್ ಸರಿ ಇಲ್ಲ ಎಂದು ನುಡಿದಿರುತ್ತೇನೆ. ದಾವಾ ಶೆಡ್ಯೂಲ್ ಸ್ವತ್ತು ನನ್ನ ಪ್ರಕಾರ ನಮ್ಮ ಒಟ್ಟು ಕುಟುಂಬದ ಸ್ವತ್ತು ಆಗಿರುತ್ತದೆ. ನನ್ನ ಪ್ರಕಾರ ವಾದಿಗೂ ಸಹ ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿ ಭಾಗ ಇರುತ್ತದೆ. ಹಿಂದಿನ ದಾವೆಯಲ್ಲಿ ನನಗೆ ವಿಲ್ ಅಡಿಯಲ್ಲಿ ಆಸ್ತಿಗಳು ಬಂದಿರುತ್ತದೆ ಎಂದು ಹೇಳಿದ್ದು, ಆದರೆ ಅದರ ಸ್ವಾಧೀನವನ್ನು ನನಗೆ ಬಿಟ್ಟಿರುವುದಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಬಿಟ್ಟು ಬೇರೆ ಪಕ್ಷಗಾರರಿಗೆ ಸಮವಾದ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಹೆಣ್ಣು ಮಕ್ಕಳಿಗೆ ಯಾವುದೇ ವಿಭಾಗ ನೀಡಿರುವುದಿಲ್ಲ ಎಂದರೆ ಸರಿ. ನಮ್ಮ

ಕುಟುಂಬದ ಆಸ್ತಿಗಳಲ್ಲಿ ನಮ್ಮ ಕುಟುಂಬದ ಹೆಣ್ಣು ಮಕ್ಕಳಿಗೆ ಆಸ್ತಿ ನೀಡಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಮ್ಮ ಕುಟುಂಬದ ಸ್ವತ್ತುಗಳನ್ನು ನನ್ನ ಮೃತ ಗಂಡ ಹಾಗೂ ಅವರ ಸಹೋದರರು ಸಹ ಸಮವಾಗಿ ಹಂಚಿಕೆ ಮಾಡಿಕೊಂಡಿರುವುದಿಲ್ಲ.

**:: ಪಾಟೀ ಸವಾಲು :: 2, 6, 4 ಮತ್ತು 7 ನೇ ಪ್ರತಿವಾದಿ ಪರ ಶ್ರೀಮತಿ ಎಸ್ ಎನ್ ಎಂ ವಕೀಲರಿಂದ ::**

ಸಾಕ್ಷಿಗೆ ಅಸಲು ದಾವಾ 66/2019 ರಲ್ಲಿನ ಒಂದು ಸಾಕ್ಷಿ ವಿಚಾರಣೆ ತೋರಿಸಲಾಗಿ ಅದರಲ್ಲಿ ಇರುವ ಸಹಿಗಳು ನನ್ನದೇ ಎಂದು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ 7 ಸಹಿಗಳನ್ನು ನಿಡಿ2 ಎ ರಿಂದ ಜಿ ಎಂದು ಗುರತಿಸಲಾಯಿತು. ನಾನು ಪಿ ಯು ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಸದರಿ ದಾವೆಯಲ್ಲಿ ನನಗೆ ಹಾಗೂ ಚೇತನ್ ಎನ್ನುವವರಿಗೆ ನಮ್ಮ ಅಜ್ಜನಾದ ಸಿದ್ದರಾಮಪ್ಪ ಹಿಸ್ಸೆಗೆ ಬಂದು ಆಸ್ತಿಯನ್ನು ನಮಗೆ ವಿಲ್ ಮಾಡಿಕೊಟ್ಟಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ಸದರಿ ವಿಲ್ ನ ಅನ್ವಯ ನನ್ನ ಹಾಗೂ ಚೇತನ್ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ನಾವು ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ರತ್ನಮ್ಮ ಎನ್ನುವವರು ನನ್ನ ತಾಯಿ ಆಗಿರುತ್ತಾರೆ. ನಾನು ನನ್ನ ತಾಯಿಯ ಜೊತೆ ಒಳ್ಳೆ ವಿಶ್ವಾಸದಲ್ಲಿ ಇರುತ್ತೇನೆ ಎಂದರೆ ಸರಿ. ನನ್ನ ಮಾವನಿಗೆ ಸೇರಿದ ಜಮೀನು ಅನ್ನು ಭದ್ರಾ ಮೇಲ್ದಂಡೆ ಯೋಜನೆ ಭೂ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಬಂದ ಹಣದ ಕುರಿತು ನನ್ನ ಮೃತ ಗಂಡನ ಸಹೋದರ ಸಹೋದರಿಯರಲ್ಲಿ ವ್ಯಾಜ್ಯ ಆಗಿರುತ್ತದೆ ಎಂದರೆ ಸಾಕ್ಷಿಯು ಅದಕ್ಕಿಂತ ಮೊದಲಿನಿಂದ ವ್ಯಾಜ್ಯ ಇರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಅಜ್ಜನ ಹಿಸ್ಸೆಗೆ ಬಂದ ಸ್ವತ್ತನ್ನು ವಿಲ್

ಮಾಡಿಕೊಟ್ಟಿರುವ ಕಾರಣ ನನಗೆ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ
(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: